ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

---

**ಸಂಖ್ಯೆ : ವಾಇ : ಉ ನಿ : ಸುಮಪ : 2017–18** **ದಿನಾಂಕ: 2–11––2017**

# <u>ಪತ್ರಿಕಾ ಆಮಂತ್ರಣ</u>

**1. ಪತ್ರಿಕಾಗೋಷ್ಠಿ:**

ಸಿದ್ದರಾಮಯ್ಯ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 3–11–2017 ಶುಕ್ರವಾರ, ಬೆಳಿಗ್ಗೆ 9–30 ಗಂಟೆಗೆ

ಸ್ಥಳ: ಇಂಡಿಯನ್ ರೋಡ್ ಕಾಂಗ್ರೆಸ್ 78ನೇ ವಾರ್ಷಿಕ ಮಹಾಧಿವೇಶನ, ಗಾಯಿತ್ರಿ ವಿಹಾರ ಗೇಟ್ ನಂ. 4, ಅರಮನೆ ಮೈದಾನ, ಬೆಂಗಳೂರು
ಮಾಧ್ಯಮ ಸಂಪರ್ಕ: ತಿಪ್ಪೇಸ್ವಾಮಿ, ಜಿ.ಎಸ್. (ಎ.ಇ. ಕೆ.ಆರ್.ಡಿ.ಸಿ.ಸಿ) ಮೊ. 9513310666

**2. The Indian Roads Congress and The Chairman,**
**State Steering Committee 78th Annual Session, IRC and**
**Govt. of Karnataka**

**Inauguration:**

**Siddaramaiah,**
**Chief Minister,**
**Government of Karnataka**

**Chief Guest:**
**Nitin Gadkari,**
**Minister for Road Transport and Highways and Shipping Govt. of India**

**Date: 3-11-2017 Friday at 11.00 A.M.**
**Venue: Gayathri Vihar, Gate No. 4, Palace Ground, Bengaluru**

ಮಾಧ್ಯಮ ಸಂಪರ್ಕ: ತಿಪ್ಪೇಸ್ವಾಮಿ, ಜಿ.ಎಸ್. (ಎ.ಇ. ಕೆ.ಆರ್.ಡಿ.ಸಿ.ಸಿ) ಮೊ. 9513310666

3. ಪತ್ರಿಕಾಗೋಷ್ಠಿ:
ಹೆಚ್.ಎಂ. ರೇವಣ್ಣ,
ಸಾರಿಗೆ ಸಚಿವರು

ದಿನಾಂಕ: 3–11–2017, ಶುಕ್ರವಾರ ಸಂಜೆ: 7–00 ಗಂಟೆಗೆ
ಸ್ಥಳ: ಸೇಂಟ್ ಮಾರ್ಕ್ಸ್ ಹೋಟೆಲ್, ಸೇಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು

# ಪತ್ರಿಕಾ ಪ್ರಕಟಣೆ

ಸಂಖ್ಯೆ 245/365

## ನವೆಂಬರ್ 3 ರಂದು ಸರ್ಕಾರಿ ಆಸ್ಪತ್ರೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಣೆ

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ನವೆಂಬರ್ 3 ರಂದು ಖಾಸಗಿ ಆಸ್ಪತ್ರೆ ವೈದ್ಯರುಗಳು ನಿರಶನ ಮಾಡುತ್ತಿರುವುದರಿಂದ ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಂದು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲು ಸರ್ಕಾರ ಸೂಚಿಸಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ರಕ್ಷಣಾಧಿಕಾರಿಗಳನ್ನು ಭೇಟಿ ಮಾಡಿ ಪರಿಸ್ಥಿತಿ ಬಗ್ಗೆ ಚರ್ಚಿಸಲಿದ್ದು, ಸರ್ಕಾರಿ ವೈದ್ಯರು ಹಾಗೂ ಪ್ಯಾರಾ ಮೆಡಿಕಲ್ ಸಿಬ್ಬಂದಿಯವರು ಅಂದು ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ 246/366

## ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಪ್ರಪ್ರಥಮವಾಗಿ ಕನ್ನಡದಲ್ಲಿ ವಿಜ್ಞಾನ

ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ (ಸ್ವಾಯತ್ತ) ಕಾಲೇಜಿನ ಸಹಯೋಗದೊಂದಿಗೆ ಮೈಸೂರಿನಲ್ಲಿ 2017 ರ ನವೆಂಬರ್ 15 ಮತ್ತು 16 ರಂದು (ಬುಧವಾರ ಮತ್ತು ಗುರುವಾರ) "ವಿಜ್ಞಾನ ತಂತ್ರಜ್ಞಾನ ಮತ್ತು ಸಮಾಜ" ಎಂಬ ವಿಷಯದ ಮೇಲೆ ಆಯೋಜಿಸುತ್ತಿದೆ.

ಕೇಂದ್ರ ವಿಷಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ವಿದ್ವತ್ಪೂರ್ಣ ಉಪನ್ಯಾಸಗಳನ್ನು ಕನ್ನಡದಲ್ಲಿ ಹೆಸರಾಂತ ವೈಜ್ಞಾನಿಕ ಸಂಸ್ಥೆಗಳ ವಿಶೇಷ ಪರಿಣಿತ ಸಂಪನ್ಮೂಲ ತಜ್ಞರಿಂದ ಆಯೋಜಿಸಲಾಗಿದ್ದು, 600 ಪ್ರತಿನಿಧಿಗಳು ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು.

ಮೂಲ ಮತ್ತು ಅನ್ವಯಿಕ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು ಕನ್ನಡದಲ್ಲಿ ಮಂಡಿಸಲು ಸಹ ಯುವ ವಿಜ್ಞಾನಿಗಳಿಗೆ ಅವಕಾಶವನ್ನು ಕಲ್ಪಿಸಲಾಗಿದೆ.

ಆಸಕ್ತರು 4 ನೇ ನವೆಂಬರ್ 2017 ರೊಳಗೆ ಇ ಮೇಲ್ ಮೂಲಕ್ (kstakannadacon@gmail.com) ನಿಗದಿತ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ: ಡಾ: ಎ.ಎಂ. ರಮೇಶ್, ಹಿರಿಯ ವೈಜ್ಞಾನಿಕ ಅಧಿಕಾರಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಮೊಬೈಲ್ :9845258894) ಇವರನ್ನು ಸಂಪರ್ಕಿಸಬಹುದಾಗಿದೆ.

**ಸಂಖ್ಯೆ 247/367**

## ಕಛೇರಿ ಸ್ಥಳಾಂತರ

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ಕಂದಾಯ ಇಲಾಖೆಯ ಸಿಟಿ ಸರ್ಕಲ್ ನಾಡ ಕಛೇರಿಯನ್ನು ಬೆಂಗಳೂರು ನಗರ ಕೆಂಪೇಗೌಡ ರಸ್ತೆಯಲ್ಲಿರುವ ಕಂದಾಯ ಭವನದ 6 ನೇ ಮಹಡಿಗೆ ಸ್ಥಳಾಂತರಿಸಲಾಗಿದೆ ಎಂದು ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಯಲಹಂಕ ತಹಶೀಲ್ದಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ 248/368**

# ಸಾವಯವ  ತಾರಸಿ ಮತ್ತು ಕೈ ತೋಟ ಅಭಿವೃದ್ಧಿ

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ತೋಟಗಾರಿಕೆ ಇಲಾಖೆಯ ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ಇಲ್ಲಿ 4-11-2017 ರಂದು "ಸಾವಯವ ತಾರಸಿ ಮತ್ತು ಕೈ ತೋಟ ಅಭಿವೃದ್ಧಿ" (Organic Kitchen and Terrace Gardening) ಕುರಿತು ನಗರವಾಸಿಗಳಿಗೆ/ರೈತರಿಗೆ/ಸಾರ್ವಜನಿಕರಿಗೆ/ವಿದ್ಯಾರ್ಥಿಗಳಿಗೆ ಒಂದು ದಿನದ ತರಬೇತಿಯನ್ನು ನೀಡಲಾಗುವುದು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಜೈವಿಕ ಕೇಂದ್ರ ಹುಳಿಮಾವು, ಬೆಂಗಳೂರು ಇವರ ಕಛೇರಿಯಲ್ಲಿ ರೂ. 300/- ಗಳನ್ನು ಪಾವತಿಸಿ ಒಂದು ದಿನ ಮುಂಚಿತವಾಗಿ ನೋಂದಣಿಯನ್ನು ಮಾಡಿಕೊಳ್ಳಬೇಕಾಗಿ ಕೋರಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 26582775, 26584904 ಇ ಮೇಲ್ Sadh.co2014@gmail.combiocentre.hulimavu@gmail.com ಸಂಪರ್ಕಿಸಬಹುದಾಗಿದೆ.

**ಸಂಖ್ಯೆ 249/369**

# ತರಬೇತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ಅಪರೇಲ್ ಟ್ರೈನಿಂಗ್ ಅಂಡ್ ಡಿಸೈನ್ ಸೆಂಟರ್ ಬೆಂಗಳೂರು ಹಾಗೂ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮ NSFDC, New Delhi ಸಹಭಾಗಿತ್ವದಲ್ಲಿ ಎಸ್.ಸಿ. ಅಭ್ಯರ್ಥಿಗಳಿಗೆ ಹೊಲಿಗೆ ಯಂತ್ರ ಕಾರ್ಯಾಚರಣೆ ತರಬೇತಿ ಶಿಬಿರವನ್ನು ಹಮ್ಮಿಕೊಂಡಿದೆ.

5 ನೇ ತರಗತಿ ಪಾಸಾಗಿರು ಅಭ್ಯರ್ಥಿಗಳಿಗೆ  ಮೂರು ತಿಂಗಳು,  ಯುಸಿ ಅರ್ಹತೆಯ ಅಭ್ಯರ್ಥಿಗಳಿಗೆ  ಉತ್ಪಾದನಾ ಮೇಲ್ವಿಚಾರದ ವಿಷಯದ ಕುರಿತು ಆರು ತಿಂಗಳು  ಉಚಿತ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವವರು 18 ರಿಂದ 50 ವರ್ಷದ ವಯೋಮಾನದವರಾಗಿರಬೇಕು. ಈ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಎ.ಟಿ.ಡಿ.ಸಿ. ನಂ. 17 ಜಿ, 40 ನೇ ಮುಖ್ಯ, 2 ನೇ ಹಂತ, ಯಶವಂತಪುರ, ಬೆಂಗಳೂರು ಈ ವಿಳಾಸಕ್ಕೆ ಖುದ್ದಾಗಿ ಮೂಲ ದಾಖಲಾತಿಗಳು ಹಾಗೂ  ಇತ್ತೀಚಿನ ಭಾವಚಿತ್ರದೊಂದಿಗೆ ಸಂಪರ್ಕಿಸಿ ನಿಗದಿತ

ನಮೂನೆಯಲ್ಲಿ ಅರ್ಜಿಯನ್ನು ತುಂಬಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-40933399/9916807401 ನ್ನು ಸಂಪರ್ಕಿಸಬಹುದಾಗಿದೆ.

**ಸಂಖ್ಯೆ 250/370**

## ನ್ಯಾ: ಎ.ಎಸ್. ಬೋಪಣ್ಣ- ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕ

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ, ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ ಇವರನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

**ಸಂಖ್ಯೆ 251/371**

## ಎಸ್.ಎಸ್.ಎಲ್.ಸಿ. ಪರೀಕ್ಷೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ

**ಸಂಖ್ಯೆ 252/372**

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ಮಾರ್ಚ್/ಏಪ್ರಿಲ್ -2018 ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಂಬಂಧಪಟ್ಟಂತೆ ದಿ: 23-3-2018 ರಿಂದ 4-4-2018 ರವರೆಗೆ ತಾತ್ಕಾಲಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಮಂಡಳಿಯ ಅಂತರ್ಜಾಲದಲ್ಲಿ www.kseeb.kar.nic.in ಪ್ರಕಟಿಸಲಾಗಿದೆ.

ಪ್ರಕಟಿಸಿದ 30 ದಿನಗಳೊಳಗಾಗಿ ವಿದ್ಯಾರ್ಥಿಗಳು ಹಾಗೂ ಪೋಷಕರು ತಾತ್ಕಾಲಿಕ ವೇಳಾಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಿದೆ.

ವಿದ್ಯಾರ್ಥಿಗಳು ಹಾಗೂ ಪೋಷಕರು ತಾತ್ಕಾಲಿಕ ವೇಳಾಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ನೇರವಾಗಿ ನಿರ್ದೇಶಕರು(ಪರೀಕ್ಷೆಗಳು) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಈ ವಿಳಾಸಕ್ಕೆ ನೇರವಾಗಿ ಅಂಚೆ

ಮೂಲಕ ಕಳುಹಿಸಬಹುದಾಗಿದೆ. ಆಕ್ಷೇಪಣೆ ಸಲ್ಲಿಸಲು 24-11-2017 ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ನಿರ್ದೇಶಕರು(ಪರೀಕ್ಷೆಗಳು) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ 253/373**

## 15 ಲಕ್ಷ ರೂ. ಮೌಲ್ಯದ ಗೋವಾ ರಾಜ್ಯದ ಮದ್ಯ ವಶ

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ಅಬಕಾರಿ ಆಯುಕ್ತ ಮಂಜುನಾಥ ನಾಯಕ್ ಅವರ ಆದೇಶದ ಮೇರೆಗೆ ಅಬಕಾರಿ ಜಂಟಿ ಆಯುಕ್ತರಾದ ಸೋಮಶೇಖರಪ್ಪ ಅವರ ನಿರ್ದೇಶನದಲ್ಲಿ ಅಬಕಾರಿ ಅಧೀಕ್ಷಕರು, ರಮೇಶ್‌ಕುಮಾರ್, ವಿಶೇಷ ತನಿಖಾ ತಂಡದ ಮುಖ್ಯಸ್ಥರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಉತ್ತರ ಕನ್ನಡ ಜಿಲ್ಲೆ, ಜೊಯಿಡಾ ತಾಲ್ಲೂಕಿನ ದಾಂಡೇಲಿ ವಲಯ ವ್ಯಾಪ್ತಿಯ ಅನಮೋಡ ಅಬಕಾರಿ ತನಿಖಾ ಠಾಣೆಯ ಮುಂಬಾಗದಲ್ಲಿ ವಾಹನ ತಪಾಸಣೆ ನಡೆಸುವಾಗ ಗೋವಾ ರಾಜ್ಯದ ಕಡೆಯಿಂದ ಬಂದ ಐಶರ್ ಲಾರಿ ಸಂ. ಟಿಎನ್ 58 ಸಿ 7490 ರಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ 864 ಲೀ ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂಬ ಮದ್ಯ, 603 ಲೀ ಹರಿಯಾಣ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂಬ ಮದ್ಯ ಒಟ್ಟು 1467 ಲೀ ಹೊರ ರಾಜ್ಯದ ಮದ್ಯ ಹಾಗೂ 756 ಲೀ ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಎಂಬ ಬೀರ್ ಜಪ್ತುಪಡಿಸಿ 51,52,000 ರೂ. ಮೌಲ್ಯದ ಮೊಕದ್ದಮೆ ದಾಖಲಿಸಿ ಇಬ್ಬರು ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಅಬಕಾರಿ ಜಂಟಿ ಆಯುಕ್ತರು, ರಾಜ್ಯ ವಿಚಕ್ಷಣ ದಳ, ಬೆಂಗಳೂರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ 254/373**

## ವಿಡಿಯೋ ಕಾನ್ಫರೆನ್ಸ್

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ದಿನಾಂಕ 11-11-2017, 12-11-2017, 18-11-2017, 19-11-2017, 25-11-2017, 26-1-2017, 9-12-2017, 10-12-2017 ರಂದು ನಡೆಯಲಿರುವ ಪದವೀಧರ ಶಿಕ್ಷಕರ ನೇಮಕಾತಿ ಪರೀಕ್ಷೆಗಳ ಕುರಿತು ಪ್ರಧಾನ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಡಶಿಕ್ಷಣ ಇವರು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮತ್ತು ಉಪ ನಿರ್ದೇಶಕರುಗಳೊಂದಿಗೆ ದಿನಾಂಕ 28–10–2017 ರಂದು ವಿಡಿಯೋ ಕಾನ್ಫರೆನ್ಸ್ ನಡೆಸಿರುತ್ತಾರೆ.

ಪರೀಕ್ಷೆಗಳ ಸುಗಮ ನಿರ್ವಹಣೆಗೆ ತಂಡಗಳನ್ನು ರಚಿಸಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಇಡೀ ಪರೀಕ್ಷೆಯನ್ನು ಕರ್ನಾಟಕ ಸೆಕ್ಯೂರ್ ಎಕ್ಸಾಮಿನಿಷೇನ್ ವ್ಯವಸ್ಥೆಯಲ್ಲಿ ನಿರ್ವಹಿಸಲಾಗುವುದು. ಈ ವ್ಯವಸ್ಥೆಯು ಸರ್ವೇಲೆನ್ಸ್ ವ್ಯವಸ್ಥೆ(ವಿಚಕ್ಷಣ ವ್ಯವಸ್ಥೆ) ಬಯೋಮೆಟ್ರಿಕ್ ಧೃಢೀಕರಣ ಮತ್ತು ಬಾರ್ ಕೋಡ್ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಇವುಗಳ ಬಳಕೆ ಮಾಡಲು ಜಿಲ್ಲಾ ಹಂತದಲ್ಲಿನ ತಂಡಗಳಿಗೆ ತರಬೇತಿ ನೀಡಲಾಗುವುದು. ಪರೀಕ್ಷಾ ಕೇಂದ್ರಗಳ ಸುರಕ್ಷಾ ವ್ಯವಸ್ಥೆಗಳನ್ನು ಮಾಡಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೋರಲಾಗಿದೆ. ಜಿಲ್ಲಾ ಆಡಳಿತ ಎಚ್ಚರದಿಂದಿದ್ದು ಪರೀಕ್ಷಾ ನಿರ್ವಹಣೆಗೆ ಎಲ್ಲಾ ರೀತಿಯ ಸಹಕಾರ ನೀಡಲು ತಿಳಿಸಲಾಗಿದೆ.

# ಅರ್ಜಿ ಆಹ್ವಾನ

**ಸಂಖ್ಯೆ 255/375**

**ಬೆಂಗಳೂರು, ನವೆಂಬರ್ 2, (ಕರ್ನಾಟಕ ವಾರ್ತೆ)**

ನೂತನ ಜವಳಿ ನೀತಿಯು (2013–18) ದಿ: 31–10–2018 ರವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಸ್ಥಾಪಿಸಲ್ಪಡುವ ಹೊಸ ಜವಳಿ /ಸಿದ್ದ ಉಡುಪು ಘಟಕಗಳು/ಆಧುನೀಕರಣ/ವೈವಿಧ್ಧೀಕರಣ/ವಿಸ್ತರಣೆ/ ತಾಂತ್ರಿಕ ಉನ್ನತೀಕರಣಗೊಳಿಸಿದ ಸಮಗ್ರ ಸರಣಿ ಮೌಲ್ಯ ಜವಳಿ ಘಟಕಗಳಿಗೆ ಸಾಲ ಆಧಾರಿತ ಬಂಡವಾಳ ಸಹಾಯಧನ, ವಿದ್ಯುತ್‌ಚ್ಛಕ್ತಿ ಸಹಾಯಧನ, ಪ್ರವೇಶ ತೆರಿಗೆ ಮರುಪಾವತಿ, ಮುದ್ರಾಂಕ ಶುಲ್ಕ ಮರುಪಾವತಿ ಸಾಮರ್ಥ್ಯವೃದ್ಧಿಗೊಳಿಸಲು ಸಹಾಯಧನ ನೀಡಲು ಅವಕಾಶವಿರುತ್ತದೆ. ಈ ನೀತಿಯಡಿ ಪರಿಶಿಷ್ಟ ಜಾತಿ/ಪಂಗಡದ ಫಲಾನುವಿಗಳಿಗೆ ಹೆಚ್ಚುವರಿ ಸಹಾಯಧನ ನೀಡಲು ಸಹ ಅವಕಾಶ ಕಲ್ಪಿಸಲಾಗಿರುತ್ತದೆ.

ಪರಿಶಿಷ್ಟ ಜಾತಿ/ಪಂಗಡದ ಉದ್ಯಮಶೀಲರಿಗೆ ಜವಳಿ ಉದ್ಯಮದಲ್ಲಿ ಕೈಗಾರಿಕೆಗಳ ಸ್ಥಾಪನೆಯ ಬಗ್ಗೆ ಹೆಚ್ಚುವರಿ ತಿಳುವಳಿಕೆ/ಅರಿವು ಮೂಡಿಸಲು ಇಲಾಖೆಯ ವತಿಯಿಂದ 05 ದಿನದ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಪೀಣ್ಯ 2 ನೇ ಹಂತ, ಬೆಂಗಳೂರು ಈ ಸಭಾಂಗಣದಲ್ಲಿ ದಿ: 13–11–2017 ರಿಂ ದ 18–11–2017 ರವರೆಗೆ ಏರ್ಪಡಿಸಲು ಉದ್ದೇಶಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಆಸಕ್ತಿಯುಳ್ಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉದ್ಯಮಶೀಲರು ಭಾಗವಹಿಸಿ ಕಾರ್ಯಕ್ರಮದ ಉಪಯೋಗ ಪಡೆದುಕೊಂಡು ಜವಳಿ ಉದ್ಯಮ ಸ್ಥಾಪಿಸಬಹುದಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕೆಳಕಂಡ ವಿಳಾಸದಿಂದ ನಿಗಧಿತ ಅರ್ಜಿಯನ್ನು ದಿ: 9–11–2017 ರೊಳಗಾಗಿ

ಪಡೆದುಕೊಳ್ಳಲು ತಿಳಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ದಿ: 10–11–2017 ರ ಸಂಜೆ 4–00 ಗಂಟೆಯ ಒಳಗಾಗಿ ಈ ಕಛೇರಿಗೆ ಸಲ್ಲಿಸಬಹುದು.

ಈ ತರಬೇತಿಗೆ ಪರಿಶಿಷ್ಟ ಜಾತಿಯ 30 ಮತ್ತು ಪರಿಶಿಷ್ಟ ಪಂಗಡದ 30 ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ. ಆದ್ದರಿಂದ ಮೊದಲ ಆದ್ಯತೆಯನ್ನು ನೀಡಲಾಗುವುದು. ಕಛೇರಿ ವಿಳಾಸ: ಜಂಟಿ ನಿರ್ದೇಶಕರ ಕಛೇರಿ, ಕೈ ಮಗ್ಗ ಮತ್ತು ಜವಳಿ ಇಲಾಖೆ, ದಕ್ಷಿಣ ವಲಯ, (ಬೆಂಗಳೂರು) ನಂ. 39/2, 4 ನೇ ಮಹಡಿ, ಎಎಸ್‍ವಿಎನ್‍ವಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು –9 ದೂರವಾಣಿ 080–22382666 ನ್ನು ಸಂಪರ್ಕಿಸಲು ಜಂಟಿ ನಿರ್ದೇಶಕರು, ಕೈ ಮಗ್ಗ ಮತ್ತು ಜವಳಿ ಇಲಾಖೆ ದಕ್ಷಿಣ ವಿಭಾಗ/ವಲಯ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಐ.ಎ.ಎಸ್. ಅಧಿಕಾರಿ ಕೆ.ಪಿ. ಕೃಷ್ಣನ್ ಅವರಿಗೆ ಐ.ಐ.ಎಂ.ಬಿ. ಪ್ರಶಸ್ತಿ

**ಬೆಂಗಳೂರು, ನವೆಂಬರ್ 2 (ಕರ್ನಾಟಕ ವಾರ್ತೆ)**

**ಭಾರತ ಸರ್ಕಾರದ ಕೌಶಾಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಕಾರ್ಯದರ್ಶಿ ಶ್ರೀ ಕೆ.ಪಿ. ಕೃಷ್ಣನ್ ಅವರು ಇತ್ತೀಚೆಗೆ ಬೆಂಗಳೂರಿನ ಇಂಡಿಯನ್ ಇನ್ಸ್‍ಟಿಟ್ಯೂಟ್‍ನ ಮ್ಯಾನೇಜ್‍ಮೆಂಟ್‍ನ ಸಂಸ್ಥಾಪಕರ ದಿನಾಚರಣೆ ಸಮಾರಂಭದಲ್ಲಿ ಡಿಸ್ಟಿಂಗ್‍ವಿಶ್ಡ್ ಅಲ್ಯೂಮಿನಿ ಅವಾರ್ಡ್ 2017 ಪ್ರಶಸ್ತಿಯನ್ನು ಸ್ವೀಕರಿಸಿದರು.**

**ಇವರು 1983 ರ ಕರ್ನಾಟಕ ಕೇಡರ್ ಐ.ಎ.ಎಸ್. ಅಧಿಕಾರಿಯಾಗಿದ್ದು ಪ್ರಸ್ತುತ ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

**ಅವರು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಭೂ ಸಂಪನ್ಮೂಲ ಇಲಾಖೆಯ ವಿಶೇಷ ಹೆಚ್ಚುವರಿ ಕಾರ್ಯದರ್ಶಿಯಾಗಿ, ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ, ಪ್ರಧಾನ ಮಂತ್ರಿಗಳ ಹಣಕಾಸು ಸಲಹಾ ಮಂಡಳಿಯ ಕಾರ್ಯದರ್ಶಿಯಾಗಿ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದು ಈ ಅವಧಿಯಲ್ಲಿ ಮಾರುಕಟ್ಟೆಗೆ ಕಾರ್ಯಾಚರಣೆಗೆ ಸಂಬಂಧಿಸಿದ ನೀತಿ ನಿಯಮಗಳ ವ್ಯಾಪಕ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಯುಐಡಿಎಐ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇವರು ಭಾರತದ ಆರ್ಥಿಕ ವಲಯದ ಕುರಿತು ಹಲವಾರು ವರದಿಗಳನ್ನು ತಯಾರಿಸಿದ್ದಾರೆ. ಭೂಮಿ, ನಗರಾಭಿವೃದ್ಧಿ ಮತ್ತು**

ಹಣಕಾಸು ವಲಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಅಧ್ಯಯನ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ.

# IIMB Award for State IAS officer

**Bengaluru, November 2 (Karnataka Information)**

**Mr. K.P. Krishnan, Secretary to Government, Ministry of Skill Development and Entrepreneurship received Distinguished alumni award 2017 on the occasion of Founders day of Indian Institute of Management, Bangalore recently.**

**He is 1983 batch Karnataka Cadre IAS officer and currently serving in the Union Government. He has served in various field in secretariat position in India in a Govt of Karnataka and Government of India and world Bank. He has served as Special/Additional Secretary Department of Land Resources, Ministry of Rural Development. Prior to that he was additional Secretary Department of Economic Affairs, Ministry of Finance, Secretary Prime Minister Economic Advisory Council and Joint Secretary, Department of Economic Affairs, Ministry of Finance. During this stint, Dr. Krishnan was closely involved with and initiated many of the deepest and most extensive reforms to marker functioning, instruments and regulatory structure in the financial structure. He played a significant part in the establishment in the formation of the founding team the UIDAI.**

**He has authorised number of reports on Indian Financial Sector and published many academic papers on land, urban development and financial sector issues.**